ಉತ್ತರಹಳ್ಳಿ ಕ್ಷೇತ್ರದಲ್ಲಿ ಬೀದಿ ದೀಪಗಳ ದುರಸ್ತಿ

464 - ಶ್ರೀ ಎಂ. ಶ್ರೀನಿವಾಸ್ (ಉತ್ತರಹಳ್ಳಿ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರಹಳ್ಳಿ ಕ್ಷೇತ್ರದ ಬಿ.ಟಿ.ಎಂ. ಬಡಾವಣೆಯ ಮುಖ್ಯರಸ್ತೆಯಲ್ಲಿ ಸೂಮಾರು 6 ತಿಂಗಳಿಂದ ಬೀದಿ ದೀಪಗಳ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೀದಿ ದೀಪಗಳು ಇಲ್ಲದೆ ಕಡೆ ದೀಪವನ್ನು ಅಳವಡಿಸಲು ಹಾಗೂ ದುರಸ್ಥಿ ಮಾಡಲು ಸರ್ಕಾರವು ಕೊಡಲೇ ಕ್ರಮ ಕೈಗೊಳ್ಳುವುದೇ?

ಇ) ರಸ್ತೆಗಳಲ್ಲಿ ಪೈಪು ಅಳವಡಿಸುವ ಸಲುವಾಗಿ ತೆಗೆದಿರುವ ಹೊಂಡಗಳನ್ನು ಮುಚ್ಚದ ಕಾರಣ ಹಲವಾರು ಅಪಘಾತಗಳು ನಡೆದಿರುವುದು ಸರ್ಕಾರ ಗಮನಿಸಿದೆಯೇ?

ಈ) ಹಾಗಿದ್ದಲ್ಲಿ, ಸದರಿ ರಸ್ತೆಯ ದುರಸ್ಥಿ ಕಾರ್ಯವನ್ನು ತ್ವರಿತಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಹೌದು.

ಆ) ಬಿ.ಟಿ.ಎಂ. ಬಡಾವಣೆಯ ಮುಖಾಂತರ ಹಾದು ಹೋಗುವ ವರ್ತುಲ ರಸ್ತೆಯ ಬೀದಿ ದೀಪಗಳ ವ್ಯವಸ್ಥೆ ದುರಸ್ತಿ ಮಾಡಬೇಕಾಗಿದ್ದು ದುರಸ್ತಿ ಪಡಿಸಲು ಕ್ರಮತೆಗೆದುಕೊಳ್ಳಲಾಗುತ್ತಿದೆ.

ಇ) ಗಮನಕ್ಕೆ ಬಂದಿದೆ.

ಈ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಪೈಪುಗಳನ್ನು ಹಾಕುವ ಕೆಲಸ ಸಂಪೂರ್ಣಗೊಂಡ ನಂತರ ರಸ್ತೆಯ ದುರಸ್ತಿ ಕೆಲಸವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಸಭಾಧ್ಯಕ್ಷರೆ, ನಾನು ಬಿ.ಟಿ.ಎಂ ಬಡಾವಣೆಯಲ್ಲಿ ದೀಪಗಳು ಇಲ್ಲ ಎಂದು ಪ್ರಶ್ನೆ ಕೇಳಿದ್ದೇನೆ. ತಾವು 'ಹೌದು' ಎಂದು ಉತ್ತರದಲ್ಲಿ ಹೇಳಿದ್ದೀರಿ. ಆದರೆ ಯಾವಾಗ ಮಾಡುತ್ತೇವೆ ಎಂದು ಇದರಲ್ಲಿ ಹೇಳಿಲ್ಲ. ಇದು ಒಂದು, ಮತ್ತು ಬೀದಿ ದೀಪಗಳು ಇಲ್ಲ ಎಂದು ಸರ್ಕಾರಕ್ಕೆ ಸುಮಾರು ಆರು ತಿಂಗಳ ಹಿಂದೆ ಹೇಳಿದ್ದೆ, ಆದರೆ ಇದೂವರೆವಿಗೂ ಅಳವಡಿಸಿಲ್ಲ. ಯಾವಾಗ ಅಳವಡಿಸುತ್ತೀರಾ? ಮೂರನೆಯದಾಗಿ ರಸ್ತೆ ಪೈಪು. ಅದು ಹೈವೇ ರೋಡು, ಆದಕಾರಣ ಅಲ್ಲಿ ಬಹಳ ರೋಡುಗಳು ಬರುತ್ತವೆ. ಅಲ್ಲಿ ಪೈಪುಗಳು ಒಡೆದು ಹೋಗಿರುವ ವಿಷಯವನ್ನು ಹಿಂದೆ ಇದ್ದಂತಹ ಮಂತ್ರಿಗಳಿಗೂ ಹೇಳಿದ್ದೆ. ಆದರೆ ಇದೂವರೆವಿಗೂ ಇದನ್ನು ಸರಿಮಾಡಿಸಿಲ್ಲ. ಇದೂವರೆವಿಗೂ ಪೈಪುಗಳನ್ನು ಹಾಕಲಿಲ್ಲ. ಪೈಪುಗಳನ್ನು ಯಾವಾಗ ಹಾಕುತ್ತೀರಿ! ಮತ್ತು ರಸ್ತೆಗಳನ್ನು ಅಗೆದುಬಿಟ್ಟಿದ್ದಾರೆ, ಇದರ ದುರಸ್ತಿ ಕಾರ್ಯ ಯಾವಾಗ ಮಾಡಿಸುತ್ತೀರಿ?

ಶ್ರೀ ಅನಂತ್‌ನಾಗ್ : ಸನ್ಮಾನ್ಯ ಸಭಾಧ್ಯಕ್ಷರೆ ಬಿಡಬ್ಲ್ಯೂಎಸ್‌ಎಸ್‌ಬಿ ಅವರು ಬೆಂಗಳೂರು, ಹೊಸೂರು, ಸರ್ಜಾಪುರ ಲೇಔಟಿಗೆ ನೀರಿನ ಪೈಪುಗಳನ್ನು ಅಳವಡಿಸುವುದಕ್ಕೋಸ್ಕರ ಅದನ್ನು ಅಗೆದಿದ್ದಾರೆ. ಅದಷ್ಟು ಬೇಗ ಆ ಕೆಲಸ ಮುಗಿದ ತಕ್ಷಣ ಅದನ್ನು ಮುಚ್ಚಿ ರಸ್ತೆಯನ್ನು ಸರಿಪಡಿಸುತ್ತೇವೆ. ಮತ್ತು ಬಿ.ಟಿ.ಎಂ. ಲೇಔಟ್ ಎಂದು ತಾವು ಏನು ಹೇಳಿದಿರಿ ಅದು ಇದುವರೆವಿಗೂ ಬಿ.ಡಿ.ಎನಲ್ಲಿ ಇತ್ತು. ಅದನ್ನು ಈಗ ಕಾರ್ಪೊರೇಷನ್‌ಗೆ ಹಸ್ತಾಂತರಿಸಲಾಗಿದೆ. ಇನ್ನೊಂದು ವಾರದೊಳಗೆ ಈ ಬಿ.ಟಿ.ಎಂ ಲೇಔಟ್ ಆಗಲಿ ಮತ್ತು ಆ ರಿಂಗ್ ರೋಡ್ ಏನಿದೆ ಅದು ಮಾತ್ರ ಬಿ.ಡಿ.ಎ. ವ್ಯಾಪ್ತಿಗೆ ಬರುತ್ತದೆ. ಆದರೂ ಈ ಎರಡೂ ಕೆಲಸಗಳನ್ನು ಇನ್ನೊಂದು ವಾರದೊಳಗೆ ಮಾಡಿಕೊಡುತ್ತೇನೆ.

ಶ್ರೀ ಎಂ. ಶ್ರೀನಿವಾಸ್ : ಕಾರ್ಪೊರೇಷನ್‌ನಲ್ಲಿ ಹೊಸದಾಗಿ 21 ವಾರ್ಡ್ಸ್ ನನ್ನ ಕ್ಷೇತ್ರದಲ್ಲಿ ಬಂದಿವೆ. ಅಲ್ಲಿ ಕಾರ್ಪೊರೇಟರ್ ಮನೆಗೆ ಟ್ಯೂಬ್‌ಲೈಟ್‌ಗಳನ್ನು ತೆಗೆದುಕೊಂಡು ಹೋಗಿ, ನೀವೇ ಹಾಕಿಕೊಳ್ಳಿ ಎಂದು ಕೊಟ್ಟು ಬರುತ್ತಾರೆ.

ಅಧ್ಯಕ್ಷರು : ಏನೇನು ಕೊಡುತ್ತಾರೆ?

ಶ್ರೀ ಎಂ. ಶ್ರೀನಿವಾಸ್ : ಟ್ಯೂಬ್‌ಲೈಟ್ಸ್ ತೆಗೆದುಕೊಂಡು ಹೋಗಿ ಕಾರ್ಪೊರೇಟರ್ ಮನೆಗಳಿಗೆ ಕೊಟ್ಟುಬಿಡುತ್ತಾರೆ.

ಅಧ್ಯಕ್ಷರು : ಪ್ರಕಾಶ್ ನೋಡಿದರೆ ಅವರೇ ಲಾರಿಗಳನ್ನು ಕಾಂಟ್ರಾಕ್ಟ್ ತೆಗೆದುಕೊಳ್ಳುತ್ತಾರೆ, ಕಸ ಹೊಡೆಯುತ್ತಾರೆ ಎಂದು ಹೇಳಿದರು. ನೀವು ನೋಡಿದರೆ ಟ್ಯೂಬ್‌ಲೈಟ್ ತೆಗೆದುಕೊಳ್ಳುತ್ತಾರೆ ಎಂದು ಹೇಳುತ್ತಿದ್ದೀರಿ.

ಶ್ರೀ ಎಂ. ಶ್ರೀನಿವಾಸ್ : ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಮೂಡಲಪಾಳ್ಯಕ್ಕೆ ತಾವು ಬರುತ್ತೇನೆ ಎಂದು ಹೇಳಿದಿರಿ, ಅದಕ್ಕೆ ನಾನು ಡೇಟ್ ಫಿಕ್ಸ್ ಮಾಡಿದ್ದೆ. ಆದರೆ ನಿಮಗೆ ಏನೋ ಕೆಲಸ ಇದ್ದ ಕಾರಣ ತಾವು ಅಂದು ಬರಲಾಗಲಿಲ್ಲ. ಆದರೆ ನಾನು ಆ ದಿವಸ ಅಲ್ಲಿಗೆ ಹೋಗಿದ್ದೆ. ನಿಮ್ಮ ಅಧಿಕಾರಿಗಳನ್ನು ಜೊತೆಯಲ್ಲಿ ಕರೆದುಕೊಂಡು ಹೋದಾಗ ಅಲ್ಲಿರುವವರನ್ನು ಎಲ್ರಿ ಟ್ಯೂಬ್‌ಲೈಟ್ ಇಲ್ಲ ಎಂದು ಕೇಳಿದಾಗ ಅದಕ್ಕೆ ಅವನು ಸಾರ್ ಈಗ ತಾನೇ 150 ಟ್ಯೂಬ್‌ಲೈಟ್ಸ್ ಕಾರ್ಪೊರೇಟರ್ ಕೈಯಲ್ಲಿ ಕೊಟ್ಟೆ ಸಾರ್ ಎಂದು ಹೇಳಿದ. ಅಂದರೆ ಈ ಕೆ.ಇ.ಬಿ. ಅಧಿಕಾರಿಗಳಲ್ಲಿ ಜವಾಬ್ದಾರಿ ಹೇಗೆ ಇದೆ ಎಂಬುದು ಗೊತ್ತಾಗುತ್ತದೆ. ಕಾರ್ಪೊರೇಟರ್ ಮನೆಗೆ ಟ್ಯೂಬ್ ಲೈಟ್ ಕೊಟ್ಟು ಬಂದೆ ಎಂದು ನನ್ನ ಮುಂದೆ ಹೇಳುತ್ತಾನೆ. ಅದಾದಮೇಲೆ, ಹೊಸೂರಿಗೆ ಹೋಗತಕ್ಕಂತಹ ರಸ್ತೆಯಲ್ಲಿ ಮೈಕೋ ಲೇಔಟ್ ಏನಿದೆ ಅಲ್ಲಿ ಮೋರಿ ಕಟ್ಟಿಕೊಂಡು ನಾಲ್ಕಾರು ದಿವಸ ನೀರು ಹೋಗದೆ ಅಲ್ಲಿ ಕೆರೆ ಆಗಿತ್ತು. ಈ ವಿಷಯ ಪತ್ರಿಕೆಯಲ್ಲೂ ಸಹ ಬಂದಿತ್ತು. ಮಾನ್ಯ ಶ್ರೀ ರೋಷನ್ ಬೇಗ್ ಅವರು ಮಂತ್ರಿಗಳಾಗಿದ್ದಾಗ ಅವರನ್ನೂ ನಾನೂ ಸಹ ಕರೆದುಕೊಂಡು ಹೋಗಿದ್ದೆ. ಆದರೆ ಇದೂವರೆವಿಗೂ ಪೈಪ್‌ಲೈನ್ ಹಾಕಿಲ್ಲ, ಮತ್ತು ಕಂಪ್ಲೀಟ್ ಮಾಡಿಲ್ಲ. ಅಲ್ಲಿ ಅಂಡರ್‌ಗ್ರೌಂಡ್ ಟ್ಯಾಂಕ್ ಇದೆ, ಆ ಟ್ಯಾಂಕ್‌ಗಳಿಗೆ ಇನ್ನೂ ಕನೆಕ್ಷನ್ ಕೊಟ್ಟಿಲ್ಲ. ಈ ಮೂರು ಕೆಲಸವನ್ನು ಯಾವಾಗ ಮಾಡುತ್ತೀರಾ, ಮತ್ತು ಸರ್ಕಲ್‌ಗೆ ಸ್ವಲ್ಪ ಮುಂದೆ

ಪೈಪ್‌ಲೈನ್ ಒಡೆದು ಹೋಗಿದೆ, ಅದು ಒಂದೊಂದು ತಿಂಗಳಿಗೂ ಒಡೆದು ಹೋಗುತ್ತಿರುತ್ತದೆ. ಆದುದರಿಂದ ಇದನ್ನೆಲ್ಲಾ ಯಾವಾಗ ಸರಿ ಮಾಡಿ ಕೊಡುತ್ತೀರೋ?

ಶ್ರೀ ಆನಂತ್‌ನಾಗ್ : ನಾನು ಈಗ ತಾನೇ ಹೇಳಿದ ಹಾಗೆ ವಿದ್ಯುತ್ ದೀಪಗಳ ವ್ಯವಸ್ಥೆಯನ್ನು ಒಂದು ವಾರದೊಳಗೆ ಮಾಡಿಸಿ ಕೊಡುತ್ತೇನೆಂದು. ಈ ಪೈಪುಗಳನ್ನು ಬಹಳ ಸಮಸ್ಯೆ ಇದೆ. ಅಲ್ಲಿ ಪೈಪುಗಳನ್ನು ಹಾಕುವುದಕ್ಕೆ ಬಹಳ ಕಾಲದಿಂದಲೂ ಪ್ರಯತ್ನ ನಡೆಯುತ್ತಲೇ ಇದೆ. ಅದು ಒಡೆಯುತ್ತಲೇ ಇದೆ. ತಮ್ಮ ಜೊತೆಯಲ್ಲೇ ನಾವು ಒಂದು ಸಲ ಪರಿಶೀಲನೆ ಮಾಡಿ, ಒಂದು ವಾರದೊಳಗೆ ಅದನ್ನು ಸರಿಪಡಿಸುತ್ತೇವೆ.

ಶ್ರೀ ಎಂ. ಶ್ರೀನಿವಾಸ್ : ಈ ಬಲ್ಬ್‌ಗೆ ಉತ್ತರ ಬರಲಿಲ್ಲ, ಕಾರ್ಪೊರೇಟರ್‌ಗೆ ಕೊಡುತ್ತೀರೋ ಅಥವಾ ತಾವೇ ಹಾಕುತ್ತೀರೋ?

ಶ್ರೀ ಆನಂತ್‌ನಾಗ್ : ನಾವೆಲ್ಲಾ ಎಂಎಲ್‌ಎ ಗಳು ಆಗಿದ್ದಾಗ ದೀಪ ಇಲ್ಲ ಎಂದು ಹೇಳಿದಾಗ, ನಮಗೂ, ನೀವೇ ಟ್ಯೂಬ್‌ಲೈಟ್‌ಗಳನ್ನು ತೆಗೆದುಕೊಂಡು ಮನೆಯಲ್ಲಿ ಇಟ್ಟುಕೊಂಡು ಹಾಕಿಸಿಕೊಳ್ಳಿ ಎಂದು ಹೇಳುತ್ತಿದ್ದರು.

ಶ್ರೀ ಎಂ. ಶ್ರೀನಿವಾಸ್ : ದೀಪ ನೀವೇ ಹಾಕಿಸಿಕೊಡಿ ಎಂದು ನಾವು ಹೇಳಲಿಲ್ಲ. ಒಂದೋ ಎರಡೋ ದೀಪ ತರಿಸಿ ಸ್ವಂತದಲ್ಲಿ ಹಾಕಿಸಿಕೊಳ್ಳುವುದು ಅಲ್ಲ, 100-150 ದೀಪಗಳನ್ನು ಕಾರ್ಪೊರೇಟರ್ ಕೈಯಲ್ಲಿ ಕೊಟ್ಟರೆ ಇಂಜಿನಿಯರ್ಸ್ ಏಕೆ ಇರಬೇಕು? ಕಾರ್ಪೊರೇಷನ್‌ನಲ್ಲಿ ಕೆ.ಇ.ಬಿ. ಡಿಪಾರ್ಟ್‌ಮೆಂಟ್ ಏಕೆ ಇರಬೇಕು? ಅದನ್ನೇ ನಾನು ಹೇಳುತ್ತಾ ಇರುವುದು. ಕಾರ್ಪೊರೇಟರ್ ಕೈಯಲ್ಲಿ ಕೊಡುವುದಕ್ಕಾ ನಾವು ದೀಪಗಳನ್ನು ಕೊಂಡುಕೊಳ್ಳುವುದು?

ಶ್ರೀ ಆನಂತ್‌ನಾಗ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಪರಿಶೀಲಿಸುತ್ತೇನೆ. ಏಕೆಂದರೆ ಕಾರ್ಪೊರೇಟರ್ ಕೈಗೆ ಕೊಟ್ಟರೋ ಅಥವಾ ಕಾರ್ಪೊರೇಟರ್ ತೆಗೆದುಕೊಂಡು ಹೋದರೋ ಎಂದು.

ಅಧ್ಯಕ್ಷರು : ಅವರು 100-150 ತೆಗೆದುಕೊಳ್ಳುವುದು ಬೇಡ, 10-15 ಬೇಕಾದರೆ ಇಟ್ಟುಕೊಳ್ಳಲಿ, ಉಳಿದಿದ್ದು ಇಲ್ಲಿ ಉಪಯೋಗಿಸಲಿ.

ವರಾಹಿ ಏತ ನೀರಾವರಿ ಯೋಜನೆ

465 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವರಾಹಿ ಏತ ನೀರಾವರಿ ಯೋಜನೆಯನ್ನು ಎಂದು ಪೂರ್ಣಗೊಳಿಸಲಾಗುವುದು?

ಆ) ವರಾಹಿ ಏತ ನೀರಾವರಿ ಯೋಜನೆಯಿಂದ ನೀರನ್ನು ರೈತರಿಗೆ ಯಾವಾಗ ಕೊಡಲಾಗುವುದು?